# ಆಹಾ ಸುದ್ದಿ!

★ ಸಸಿತೋಟ



ಕಳೆದ ವಾರ ಜೆರುಸಲೇಂನಲ್ಲಿ ಆಸ್ಟ್ರಿಯಾದ ನರ್ತಕರದ್ದೇ ಕಾರುಬಾರು. ಕಂಡ ಕಂಡಲ್ಲಿ ರಸ್ತೆಯ ಪಕ್ಕ, ಕಟ್ಟಡಗಳ ಮೇಲೆ, ಕಸದ ರಾಶಿಯ ಮುಂದೆ ಈ ನರ್ತಕರು 'ನಗರದಲ್ಲಿ ಮಾನವ ದೇಹ' ಎಂಬ ಪ್ರದರ್ಶನ ನೀಡಿದರಂತೆ. ಈ ರೀತಿ ಸುರುಟಿಕೊಂಡಿದ್ದ ನರ್ತಕರಿಗೆ ತ್ರಾಸಾಯ್ತೋ ಇಲ್ಲವೋ ಗೊತ್ತಿಲ್ಲ, ಜನರಂತೂ ಕಷ್ಟಪಟ್ಟು ನೋಡಿರಬಹುದು.

ಷರ್ಟ್ ತೀರಾ ಫಾರ್ಮಲ್. ಟಿ–ಷರ್ಟ್? ಛೇ, ಅದು ತುಂಬಾ ಕ್ಯಾಶುವಲ್ ಆಯ್ತು ಎನ್ನುವವರಿಗೆ ಸ್ಪೇನಿನ ಫ್ಯಾಷನ್ ಬ್ರ್ಯಾಂಡ್ ಬ್ಯಾಲೆನ್ಸಿಯಾಗಾ ಇವರೆಡನ್ನೂ ಬ್ಯಾಲನ್ಸ್ ಮಾಡಿ ಷರ್ಟ್– ಟಿ ಷರ್ಟ್ ತಂದಿದೆ. ಆದರೆ ನಿಮ್ಮ ಜೇಬಿನಲ್ಲಿ 87,300 ರೂಪಾಯಿ (1290 ಡಾಲರ್) ಇದ್ದರೆ ಮಾತ್ರ ಈ ವಿಚಿತ್ರ ಅಂಗಿಯಲ್ಲಿ ತೂರಿಕೊಂಡು ಜೋಕರ್ ತರಹ ಓಡಾಡಬಹುದು.



ಕಾದಂಬರಿಕಾರ, ಅಂಕಣಕಾರ ಚೇತನ್ ಭಗತ್ ಸಾಮಾಜಿಕ ಜಾಲತಾಣದಲ್ಲಿ ಹಾಕುವ ಪೋಸ್ಟ್‌ಗಳು ಯಾವತ್ತೂ ಚರ್ಚಾಸ್ಪದವೇ. ಅದಕ್ಕೇ ಆತ 'ನೋ ಮೋರ್ ಎಕ್ಸ್‌ಪ್ಲೆನೇಶನ್ ಪಾಲಿಸಿ' ಎಂಬ ಶೀರ್ಷಿಕೆ ಅಡಿಯಲ್ಲಿ ಟ್ವಿಟರ್‌ನಲ್ಲಿ ಇತ್ತೀಚೆಗೆ ಪೋಸ್ಟ್ ಮಾಡಿದ್ದು ಬರೋಬ್ಬರಿ 580 ಶಬ್ದಗಳು! ಕಾದಂಬರಿಕಾರನೆಂದು ಈ ರೀತಿ ಸಾಬೀತುಪಡಿಸುವ ಅಗತ್ಯ ಇರಲಿಲ್ಲ ಎಂದು ಟ್ವಿಟ್ಟಿಗರು ಚರ್ಚೆ ಶುರು ಮಾಡಿದ್ದಾರಂತೆ.

ನಿಮ್ಮ ನೆರೆಹೊರೆಯವರ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕೆ? ನೀವು ಮಾಡಬೇಕಾದುದು ಇಷ್ಟೇ. ಗೂಗ್ಲ್‌ನಿಂದ 'ನೇಬರ್ಸ್' ಎಂಬ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಿ. ಅದು ನಿಮ್ಮ ಪಕ್ಕದ ಮನೆಯವರ, ಸುತ್ತಮುತ್ತಲಿನವರ ಇತಿಹಾಸ, ವರ್ತಮಾನ ಎಲ್ಲವನ್ನೂ ಬಿಚ್ಚಿಡುತ್ತದಂತೆ. ಇನ್ನು ಮುಂದೆ ಗಂಡ ಹೆಂಡತಿ ಪರಸ್ಪರರ ಬಗ್ಗೆ ತಿಳಿದುಕೊಳ್ಳುವಂತಹ ಆ್ಯಪ್ ಕೂಡಾ ಬರಬಹುದು. ಸ್ಮಾರ್ಟ್‌ಫೋನ್ ರೆಡಿಯಾಗಿಟ್ಟುಕೊಳ್ಳಿ.

ಭಾರತದಲ್ಲಿ ಕೆಲವು ಕಡೆ, ಅದರಲ್ಲೂ ಉತ್ತರ ಭಾರತದಲ್ಲಿ ವರ ಕುದುರೆಯ ಮೇಲೆ ಮದುವೆ ಛತ್ರಕ್ಕೆ ಆಗಮಿಸುವ ಸಂಪ್ರದಾಯವಿದೆ. ಆದರೆ ಚೀನಾದಲ್ಲಿ ವಧುವೊಬ್ಬಳು ಬಸ್ಸನ್ನು ತಾನೇ ಚಲಾಯಿಸಿಕೊಂಡು ವಿವಾಹ ಸ್ಥಳಕ್ಕೆ ಆಗಮಿಸಿದಳಂತೆ. ಮಧ್ಯದಲ್ಲಿ ವರನನ್ನೂ ಬಸ್‌ಗೆ ಹತ್ತಿಸಿಕೊಂಡು ಬಂದಳಂತೆ. ಬದುಕೆಂಬೊ ಪಯಣದಲ್ಲಿ ಯಾರು ಮುಂದೆ ಎಂಬುದನ್ನು ತೋರಿಸಿರಬಹುದು.





ಜಪಾನಿನ ಈ ಎರಡು 'ಯುಬಾರಿ' ಕರಬೂಜ ಹಣ್ಣುಗಳ ಬೆಲೆ ಬಲು ದುಬಾರಿ. ಬರೋಬ್ಬರಿ 19,61,195 ರೂಪಾಯಿ (29,300 ಡಾಲರ್). ಈ ಹಣದಲ್ಲಿ ಅಲ್ಲಿ ಆರಾಮವಾಗಿ ಐಷಾರಾಮಿ ಕಾರನ್ನು ಕೊಳ್ಳಬಹುದು. ಆದರೆ ನೋಡಿದವರು 'ಊ... ಆಹಾ...' ಎನ್ನುವುದನ್ನು ಕೇಳಲು ಈ ಹಣ್ಣುಗಳನ್ನು ಖರೀದಿಸಿದ ಕೋಟ್ಯಧಿಪತಿಗೆ ಇಷ್ಟವಂತೆ. ದುಡ್ಡಿದ್ದವರಿಗೆ ದಿನಕ್ಕೊಂದು ಹೊಸ ಹೊಸ ಷೋಕಿ.